# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಕಾರ್ಯದರ್ಶಿ, ವಾರ್ಡ್ ಸಮಿತಿ/ಸಹಾಯಕ ಅಭಿಯಂತರರ ಕಛೇರಿ, ದಯಾನಂದನಗರ ವಾರ್ಡ್–97**

**1ನೇ ಮುಖ್ಯ ರಸ್ತೆ. ಶ್ರೀರಾಂಪುರ ಪೋಲಿಸ್ ಠಾಣೆ ಹಿಂಭಾಗ, ದಯಾನಂದನಗರ**

---

*ಸಂ: ವಾ–97/ವಾ.ಸ/ಸಭಾನಡವಳಿ–02/20–21* *ದಿ:21.10.20*

**ಸಭೆಯ ನಡವಳಿಗಳು**

ದಿನಾಂಕ: 21.10.20 ಬುಧವಾರ ಪೂರ್ವಾಹ್ನ 11.00 ಘಂಟೆಗೆ ವಾರ್ಡ್–97 ದಯಾನಂದನಗರದ ವಾರ್ಡ್ ಮಟ್ಟದ ಸಮಿತಿ ಸಭೆಯನ್ನು ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಶ್ರೀಮತಿ ಅಮೃತ ಸಾಯಿ ಸಮಿತಿಯ ಕಾರ್ಯದರ್ಶಿಗಳು ಹಾಗೂ ಸಂಚಾಲಕರು ವಾರ್ಡ್–97 ರವರು ಸಭೆಗೆ ಆಗಮಿಸಿರುವ ಎಲ್ಲರಿಗೂ ಸ್ವಾಗತ ಕೋರಿದರು. ನಂತರ ಸಾರ್ವಜನಿಕರ ಕುಂದು ಕೊರತೆಗಳು ಹಾಗೂ ವಾರ್ಡ್ ಅಭಿವೃದ್ಧಿಗೆ ಸಂಬಂದಿಸಿದಂತೆ ಹಾಗೂ ಕೋವಿಡ್–19 ವೈರಸ್‌ನ ಸೋಂಕಿನ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು, ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹಾಗೂ ಸಾರ್ವಜನಿಕರ ಹಿತರಕ್ಷಣೆಗಾಗಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲು ಸಭೆಗೆ ಆಗಮಿಸಿರುವ ಎಲ್ಲಾ ಅದೀಕಾರಿಗಳಿಗೆ ಸಹಾಯಕ ಅಭಿಯಂತರರು ಸಭೆಗೆ ಸ್ವಾಗತ ಕೋರುತ್ತಾ,ಸಭೆಯನ್ನು ಮುನ್ನಡೆಸಲಾಯಿತು.

**ಸಭೆಗೆ ಹಾಜರಿದ್ದವರು:**

1. ಶ್ರೀಮತಿ.ಅಮೃತ ಸಾಯಿ
   ನೋಡಲ್ ಅಧಿಕಾರಿಗಳು ಹಾಗೂ ವಾರ್ಡ ಸಮಿತಿ ಅಧ್ಯಕ್ಷರು.
2. ಶ್ರೀಮತಿ.ಅಮೃತ ಸಾಯಿ
   ಕಾರ್ಯದರ್ಶಿ ಹಾಗೂ ಸಂಚಾಲಕರು.
3. ಶ್ರೀ.ಕಿರಣ್ ಕುಮಾರ್.ಸಿ, ವಾಟರ್ ಇನ್ಸ್ಪೆಕ್ಟರ್.ಬಿ.ಡಬ್ಲ್ಯೂಎಸ್.ಎಸ್.ಬಿ
4. ಶ್ರೀ.ಕಿರಣ್ ಕುಮಾರ್.ಹೆಚ್.ಸಿ,ಕಂದಾಯ ಪರೀವೀಕ್ಷಕರು.
5. ಶ್ರೀ.ಮಂಜುನಾಥ್.ಬಿ, ಕಂದಾಯ ಪರೀವೀಕ್ಷಕರು.
6. ಎನ್. ಕುಮಾರ್, ಎಸ್. ಡಬ್ಲ್ಯೂ.ಎಂ ಮೇಸ್ತ್ರಿ

***ಸಭೆಯಲ್ಲಿ ಚರ್ಚಿಸಲಾದ ವಿಷಯಗಳು***

ಮೇಲೆ ಹಾಜರಿದ್ದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರು ಸಮುಖದಲ್ಲಿ ವಾರ್ಡ್ ಸಂ:97 ರ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ಸಭೆಯನ್ನು ಉದ್ದೇಶಸಿ ಮಾತನಾಡುತ್ತಾ ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು ಸದಸ್ಯರ ಮುಖ ಪರಿಚಯದೊಂದಿಗೆ ವಿವರಿಸುತ್ತಾ ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರುತ್ತಾ ವಾರ್ಡ್ ವ್ಯಾಪ್ತಿಯ ಜಲಮಂಡಳಿ, ಬೆಸ್ಕಂ ಘನತ್ಯಾಜ್ಯ ವಿಲೇವಾರಿ, ಆರೋಗ್ಯ ಇಲಾಖೆ, ಕಂದಾಯ, ಕಾಮಗಾರಿ ಇಲಾಖೆಗಳಿಗೆ ಸಂಬಂದಿಸಿದಂತೆ ಪ್ರಸ್ತುತ ಇರುವ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳು ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಚರ್ಚಿಸಲಾಯಿತು

ಶ್ರೀ.ಕಿರಣ್ ಕುಮಾರ್.ಹೆಚ್.ಸಿ,ಕಂದಾಯ ಪರೀವೀಕ್ಷಕರು ಮಾತಾಡಿ ಕೋವಿಡ್–19 ರ ಕೆಲಸಗಳನ್ನು ನಿರ್ವಹಿಸುತ್ತಿರುವಾಗಿ ತಿಳಿಸಿದ್ದು, ಕೋವಿಡ್ ಸೊಬಂದಪಟ್ಟಂತೆ ಮಾಹಿತಿಯನ್ನು ಸಹಾಯಕ ಅಭಿಯಂತರರು ರವರಿಗೆ ನೀಡಲು ತಿಳಿಸಿತು.

Scanned with CamScanner

ಸಹಾಯಕ ಅಭಿಯಂತರರು ಅಂಬೇಡ್ಕರ್ ನಗರದಲ್ಲಿ ಒಳಚರಂಡಿ ಪೈಪ್‌ಗಳನ್ನು ಬದಲಿಸುವ ಬಗ್ಗೆ ದೂರು ಬಂದಿರುವ ವಿಷಯವನ್ನು ಶ್ರೀ.ಕಿರಣ್ ಕುಮಾರ್.ಸಿ, ವಾಟರ್ ಇನ್ಸ್ಪೆಕ್ಟರ್.ಬಿ.ಡಬ್ಲ್ಯೂಎಸ್.ಎಸ್.ಬಿ ರವರಿಗೆ ತಿಳಿಸುತ್ತಾರೆ.

ನೋಡಲ್ ಅಧಿಕಾರಿಗಳ ವಾರ್ಡ ಪರಿವೀಕ್ಷಣ ಸಮಯದಲ್ಲಿ ಹಲವಾರು ಕಡೆ ರಸ್ತೆ ಬದಿಯಲ್ಲಿ ಕಸದ ರಾಶಿ ಕಂಡಿದ್ದು, ಅದನ್ನು ದಿನ ನಿತ್ಯ ವಿಲೇವಾರಿ ಮಾಡಲು ಎನ್. ಕುಮಾರ್, ಎಸ್. ಡಬ್ಲ್ಯೂ.ಎಂ ಮೇಸ್ತ್ರಿ ರವರಿಗೆ ಸೂಚಿಸಲಾಯಿತು. ಹಾಗೂ ಮುದಪ್ಪ ಗಾರ್ಡನಲ್ಲಿರುವ ಖಾಲಿ ನಿವೇಶನದಲ್ಲಿರುವ ಕಸವನ್ನು ತೆಗೆಸಿ ಸ್ವಚ್ಛ ಮಾಡಲು ಸೂಚಿಸಲಾಯಿತು.

ನೋಡಲ್ ಅಧಿಕಾರಿಗಳ ವಾರ್ಡ ಪರಿವೀಕ್ಷಣ ಸಮಯದಲ್ಲಿ ವಾರ್ಡ ವ್ಯಾಪಿಯಲ್ಲಿ ಇರುವ ಹೂಳನ್ನು ತೆಗೆಸಲು ಕಾಮಗಾರಿ ಇಲಾಖೆಗೆ ಸೂಚಿಸಲಾಯಿತು ಹಾಗೂ ರಸ್ತೆ ಗುಂಡಿಗಳನ್ನು ಮುಚ್ಚಲು ಸೂಚಿಸಲಾಯಿತು.ಸಹಯಕ ಅಭಿಯಂತರರಿಗೆ ಸಹಾಯ ಆಪ್‌ನಲ್ಲಿರುವ ದೂರುಗಳನ್ನು ಪರಿಹರಿಸಲು ಸೂಚಿಸಲಾಯಿತು.

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೋಳ್ಳಲು ಸೂಚಿಸಿ ಸಮಿತಿಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕರಿಗಳು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ ಸಂ–97

ಪ್ರತಿಯನ್ನು:

1. ಮಾನ್ಯ ಆಯುಕ್ತರ ಆಪ್ತ ಸಹಾಯಕರಿಗೆ ಕಳುಹಿಸುತ್ತಾ ಮಾನ್ಯ ಆಯುಕ್ತರ ಗಮನಕ್ಕೆ ತರುವಂತೆ ಕೋರಿದೆ.
2. ವಿಶೇಷ ಆಯುಕ್ತರು ಆಡಳಿತ ರವರ ಅವಾಗಹನೆಗೆ ಸಲ್ಲಿಸಿದೆ.
3. ವಲಯ ಆಯುಕ್ತರು (ಪಶ್ಚಿಮ) ರವರ ಅವಾಗಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ಪಶ್ಚಿಮ) ರವರ ಅವಾಗಹನೆಗೆ ಸಲ್ಲಿಸಿದೆ.
5. ನೋಡಲ್ ಅಧಿಕಾರಿಗಳು ಹಾಗೂ ವಾರ್ಡ ಸಮಿತಿ ಅಧ್ಯಕ್ಷರು ರವರ ಅವಾಗಹನೆಗೆ ಸಲ್ಲಿಸಿದೆ.
6. ಕಛೇರಿ ಕಡತಕ್ಕೆ

Scanned with CamScanner